ಸಿಸಿ 1667/2019
F X of Pw1

**ದಿ: 04.08.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಸಿ ಎನ್ ಸಿ ವಕೀಲರಿಂದಃ**

ನಾನು ದಿನಗೂಲಿಗಾಗಿ ಕೆಲಸವನ್ನು ಸ್ವತಃ ಮತ್ತು ಗುತ್ತಿಗೆದಾರರಾಗಿ ಕೆಲಸ ಮಾಡುತ್ತಿರುತ್ತೇನೆ. ಸಾಕ್ಷಿ ಮುಂದುವರೆದು ನಾನು ಗುತ್ತಿಗೆದಾರನಾಗಿ ಕೆಲಸ ನಿರ್ವಹಿಸುತ್ತಿಲ್ಲ ನನ್ನ ಪರವಾನಗಿ ಇಲ್ಲಾ ನಾನು ಕೂಲಿ ಕೆಲಸ ಮಾಡುತ್ತೇನೆ ಎಂದು ಹೇಳುತ್ತಾರೆ. ನನಗೆ ಒಂದು ದಿನಕ್ಕೆ ರೂ. 500 ಕೂಲಿ ಪಡೆಯುತ್ತೇನೆ ಎಂದರೆ ಸರಿ. ನನಗೆ ಪ್ರತಿದಿನ ಕೂಲಿ ಕೆಲಸ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನನ್ನು ಯಾರು ಕೂಲಿ ಕೆಲಸಕ್ಕೆ ಕರೆದರೂ ಹೋಗುತ್ತೇನೆ. ನನ್ನ ಕುಟುಂಬದಲ್ಲಿ 5 ಜನ ಸದಸ್ಯರು ಇದ್ದು ನನ್ನ ಕುಟುಂಬದ ಸಂಸಾರವನ್ನು ತೂಗಿಸಲು ರೂ. 15,000 ಸಾಕಾಗುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಕುಟುಂಬದಲ್ಲಿ ಮಾಂಸಹಾರವನ್ನು ಸೇವನೆ ಮಾಡುವುದರಿಂದ ತುಂಬಾ ಹಣ ವ್ಯವವಾಗುತ್ತದೆ ಎಂದರೆ ಸಾಕ್ಷಿಯು ನಾವು ಮಾಂಸಹಾರವನ್ನು ಸೇವನೆ ಮಾಡುವುದಿಲ್ಲ ಎಂದು ನುಡಿಯುತ್ತಾರೆ. ನಮ್ಮ ಕುಟುಂಬದಲ್ಲಿ 5 ಜನರಿದ್ದು ಅದರಲ್ಲಿ 3 ಜನ ಮಕ್ಕಳು ಇರುತ್ತಾರೆ. 3 ಮಕ್ಕಳಲ್ಲಿ ಇಬ್ಬರು ಮಕ್ಕಳು ಶಾಲೆಗೆ ಹೋಗುತ್ತಾರೆ ಒಬ್ಬ ಮಗಳು ಮನೆಯಲ್ಲಿ ಇರುತ್ತಾಳೆ. ಈ ಬಗ್ಗೆ ಯಾವುದೇ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಜ್ಞಾನ ಭಾರತಿ ಶಾಲೆಯಲ್ಲಿ ನನ್ನ ಇಬ್ಬರು ಮಕ್ಕಳು ಓದುತ್ತಿದ್ದು ಅದು ಖಾಸಗಿ ಶಾಲೆಯಾಗಿರುತ್ತದೆ, ಸಾಕ್ಷಿಯು ಮುಂದುವರೆದು ನನ್ನ ಎರಡೂ ಮಕ್ಕಳಿಗೂ ಆರ್ ಟಿ ಐ ಅಡಿ ಶಾಲೆಗೆ ಉಚಿತ ಪ್ರವೇಶ ದೊರೆತಿರುತ್ತದೆ ಎಂದು ನುಡಿಯುತ್ತಾರೆ. ಈ ರೀತಿ ಉಚಿತವಾಗಿ ಪ್ರವೇಶ ದೊರೆತರೂ ಶಾಲೆಯಲ್ಲಿ ವಂತಿಗೆ ಹಣ ಪಡೆಯುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಒದಗಿಸಿಲ್ಲ ಎಂದರೆ ಸರಿ. ನಾನು ಹಣವನ್ನು ಕಡೂರಿನಲ್ಲಿರುವ ಮನೆಯಲ್ಲೇ ಇಟ್ಟುಕೊಂಡಿದ್ದೆ.

**( ಮುಂದುವರೆದ ಪಾಟೀ ಸವಾಲಿಗಾಗಿ ಸಮಯಕೋರಿದ್ದರಿಂದ ಮುಂದೂಡಲಾಯಿತು )**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**
**ಓಃಹೇಃಕೇಃಸಃಇಃವಃಒಃ**

**3 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
**ಕಡೂರು**